# ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 206(16)

ಉತ್ತರಿಸಬೇಕಾದ ಸಚಿವರು : ಕೃಷಿ ಸಚಿವರು

ಉತ್ತರಿಸಬೇಕಾದ ದಿನಾಂಕ : 18/08/2026

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| ಅ) | ಕೆಳದಿ ಶಿವಪ್ಪ ನಾಯಕ ಕೃಷಿ ಹಾಗೂ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಬ್ರಹ್ಮಾವರ ಕೃಷಿ ಮತ್ತು ತೋಟಗಾರಿಕಾ ಸಂಶೋಧನ ಕೇಂದ್ರದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸಲು ಮುಂದಿನ ಕ್ರಮ ಕೈಗೊಳ್ಳುವಂತೆ 2010ರಲ್ಲಿ ಕೃಷಿ ಇಲಾಖೆಗೆ ಸೂಚಿಸಲಾಗಿದ್ದರೂ ಇವರೆಗೆ ಅನುಷ್ಠಾನವಾಗಿಲ್ಲದೆ ಇರಲು ಕಾರಣವೇನು; | ಬ್ರಹ್ಮಾವರ ಕೃಷಿ ಸಂಶೋಧನಾ ಕೇಂದ್ರವು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ವ್ಯಾಪ್ತಿಗೆ ಒಳಪಡುತ್ತದೆ. ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಕೃಷಿ ಕಾಲೇಜು ಸ್ಥಾಪಿಸಬೇಕಾದರೆ ಭಾರತೀಯ ಕೃಷಿ ಅನುಸಂಧಾನ ಪರಿಷತ್ Model Act ಅನ್ವಯ ಒಂದು ಕೃಷಿ ಮಹಾವಿದ್ಯಾಲಯಕ್ಕೆ ಪ್ರಮುಖ 23 ಬೋಧಕ (core faculty) ಹಾಗೂ 68 ಬೋಧಕೇತರ ಸಿಬ್ಬಂದಿಯ ಅಗತ್ಯವಿದ್ದು, 6 ಕೃಷಿ ಮಹಾವಿದ್ಯಾಲಯಗಳಿಗೆ 138 ಬೋಧಕ ಹಾಗೂ ಸುಮಾರು 408 ಬೋಧಕೇತರ ಸಿಬ್ಬಂದಿಯ ಅಗತ್ಯವಿರುತ್ತದೆ. ಇದಲ್ಲದೇ, ಸಂಶೋಧನೆ ಹಾಗೂ ವಿಸ್ತರಣೆ ಆಧ್ಯಾದೇಶಗಳನ್ನು ಪಾಲಿಸಲು ಕೃಷಿ ಸಂಶೋಧನಾ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳನ್ನು ಸಹ ಸ್ಥಾಪಿಸಿ ಅಗತ್ಯ ವಿಜ್ಞಾನಿ ವೃಂದ/ ಸಿಬ್ಬಂದಿಗಳನ್ನು ಒದಗಿಸಬೇಕಾಗಿರುತ್ತದೆ. ಕೃಷಿ ವಿಶ್ವವಿದ್ಯಾಲಯದ ಆಡಳಿತ ನಿರ್ವಹಣೆ ಕೈಗೊಳ್ಳಲು ಬೋಧನೆ, ಸಂಶೋಧನೆ ಹಾಗೂ ವಿಸ್ತರಣೆ ವಿಭಾಗಗಳಲ್ಲಿ ಅಧಿಕಾರಿಗಳನ್ನು ನೇಮಿಸಲು ಅಧಿಕ ಆರ್ಥಿಕ ವೆಚ್ಚವನ್ನು ಭರಿಸಬೇಕಾದ ಅಗತ್ಯವಿರುತ್ತದೆ.<br><br>ಸ್ಥಾಪಿತ ಕೃಷಿ ಮಹಾವಿದ್ಯಾಲಯವು ಸುಸ್ಥಿರವಾಗಿ ಕಾರ್ಯನಿರ್ವಹಿಸಲು ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ವತಿಯಿಂದ ರೂಪಿಸಲಾದ ನಿಯಮಾವಳಿಯ ಅನುಸಾರವಾಗಿ ಮಾನ್ಯತೆ (Accreditation) ಪಡೆಯಬೇಕಾಗುತ್ತದೆ. ಮಾನ್ಯತೆ ಪಡೆಯದ ಕೃಷಿ ಕಾಲೇಜು/ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಲು ಹಿಂಜರಿಯುತ್ತಾರೆ ಹಾಗೂ ಇಂತಹ ಕಾಲೇಜುಗಳಲ್ಲಿ ತೇರ್ಗಡೆಗೊಂಡ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ/ನೌಕರಿ ಪಡೆಯಲು ಸಾಧ್ಯವಿರುವುದಿಲ್ಲ.<br><br>ಅಲ್ಲದೆ, ನೂತನ ಕೃಷಿ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸುವ ಸಂಬಂಧ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಹಾಗೂ ಅಭಿವೃದ್ಧಿ |
| ಆ) | ಬ್ರಹ್ಮಾವರ ಕೃಷಿ ಮಹಾವಿದ್ಯಾಲಯ ಸ್ಥಾಪಿಸಲು ಉದ್ದೇಶಿಸಿರುವ ಪ್ರದೇಶದಲ್ಲಿ ಸುಮಾರು 1,22,132 ಹೆಕ್ಟೇರ್ ಕೃಷಿ ಭೂಮಿ ಹೊಂದಿದ್ದರೂ ಹಾಗೂ ದಿನಾಂಕ: 06/04/2024ರಂದು ತಜ್ಞರ ಸಮಿತಿಯು ಶಿಫಾರಸ್ಸು ಮಾಡಿದ್ದರೂ ಇವರೆಗೆ ಸ್ಥಾಪನೆಯಾಗದಿರಲು ಕಾರಣವೇನು; | |
| ಇ) | ಕರ್ನಾಟಕ ಸರ್ಕಾರ 2010ರಲ್ಲಿ ಬ್ರಹ್ಮಾವರ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸಲು ಕೃಷಿ ಇಲಾಖೆಗೆ ನೀಡಿದ ಸೂಚನೆಯಂತೆ ಇಲಾಖೆಯು ಇಂದಿನವರೆಗೆ ಕೈಗೊಂಡಿರುವ ಅನುಸರಣ ಕ್ರಮಗಳೇನು; ಯಾವ್ಯಾವ ವಿಷಯಗಳಿಗೆ ಅನುಮೋದನೆ ನೀಡಿ ಅನುದಾನ ಮಂಜೂರು ಮಾಡಿದೆ; | |

| | | |
|---|---|---|
| | | ಆಯುಕ್ತರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಪರಿಣಿತ ಸಮಿತಿಯನ್ನು (Expert Committee) ರಚಿಸಲಾಗಿದ್ದು, ಈ ಸಮಿತಿಯು ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳ ಬಲವರ್ಧನೆ / ಹೊಸ ಕೃಷಿ ಕಾಲೇಜುಗಳ ಸ್ಥಾಪನೆ ಮತ್ತು ಅವುಗಳ ಇನ್ನಿತರ ಅಭಿವೃದ್ಧಿಗೆ ಅಗತ್ಯವಿರುವ ಅಂಶಗಳನ್ನು ಪರಿಶೀಲಿಸುತ್ತದೆ. ರಾಜ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ ಹೊಸ ಕೃಷಿ ಕಾಲೇಜುಗಳನ್ನು ಸ್ಥಾಪಿಸುವಂತಹ ಪ್ರಸ್ತಾವನೆಗಳನ್ನು ಈ ಸಮಿತಿಯ ಮುಂದೆ ಸಲ್ಲಿಸಬೇಕಾಗಿರುತ್ತದೆ.<br><br>ಈ ಪರಿಣಿತ ಸಮಿತಿಯು ಇದುವರೆವಿಗೂ ಆರು ಸಭೆಗಳನ್ನು ನಡೆಸಿದ್ದು, ದಿನಾಂಕ:18.12.2019 ರಂದು ಜರುಗಿದ 5ನೇ ಸಭೆಯಲ್ಲಿ ನೂತನ ಕೃಷಿ ಕಾಲೇಜುಗಳನ್ನು ಪ್ರಾರಂಭಿಸುವ ಮುಂಚೆ ಈಗಿರುವ ಕೃಷಿ ಕಾಲೇಜುಗಳ ಬಲವರ್ಧನೆಗೆ ಇರುವಂತಹ ಕೊರತೆಗಳನ್ನು ಗಮನಿಸಿ, (1) ಮೂಲಭೂತ ಸೌಕರ್ಯಗಳು; (2) ಬೋಧಕ ಸಿಬ್ಬಂದಿಯ ಪ್ರಮಾಣ; (3) ಈಗಿರುವ ಕೃಷಿ ಪದವೀಧರರ ಲಭ್ಯತೆ ಮತ್ತು ಬೇಡಿಕೆ- ಇವುಗಳನ್ನು ಪರಿಶೀಲಿಸಿ, ಇವುಗಳ ಸಮತೋಲನದ ನಂತರ ಮುಂಬರುವ ಪ್ರಸ್ತಾವನೆಗಳನ್ನು ಕೈಗೊಳ್ಳಬಹುದಾಗಿದೆ ಎಂದು ಪರಿಣಿತ ಸಭೆಯ ನಡವಳಿಯಾಗಿರುತ್ತದೆ.<br><br>ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಬಹಳಷ್ಟು ಬೋಧಕ ಮತ್ತು ಬೋಧಕೇತರ ಹುದ್ದೆಗಳು ಖಾಲಿ ಇದ್ದು, ನೂತನವಾಗಿ ಮಹಾವಿದ್ಯಾಲಯವನ್ನು ಪ್ರಾರಂಭಿಸಿದ್ದಲ್ಲಿ, ಬೋಧಕರ ಕೊರತೆ ಉಂಟಾಗಲಿರುವ ಹಿನ್ನೆಲೆಯಲ್ಲಿ, ಪ್ರಸ್ತುತ ಚಾಲ್ತಿಯಲ್ಲಿರುವ ಕಾಲೇಜುಗಳನ್ನು ಬಲಪಡಿಸಲು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ, ಬ್ರಹ್ಮಾವರದಲ್ಲಿ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸಲು ಸಾಧ್ಯವಾಗಿರುವುದಿಲ್ಲ. |
| ಈ) | ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆಯಲಾಗಿದೆಯೇ; ಈ ಸಂಬಂಧ ಕೈಗೊಂಡಿರುವ ಇತರೆ ಕ್ರಮಗಳೇನು; ಕೆಳದಿ ಶಿವಪ್ಪ ನಾಯಕ ಕೃಷಿ ಹಾಗೂ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯವು 5 ಕೋಟಿ ರೂಪಾಯಿ ಅನುದಾನ ನೀಡಿದ್ದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸಬಹುದೆಂದು ನೀಡಿರುವ ವರದಿಯ ಅನುಷ್ಠಾನದ ಕುರಿತು ಸರ್ಕಾರದಲ್ಲಿ ಯಾವ ಹಂತದಲ್ಲಿದೆ; 5 ಕೋಟಿ ಅನುದಾನ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗಿ, ಸದರಿ ಪ್ರಸ್ತಾವನೆ ಕುರಿತಂತೆ ಈಗಾಗಲೇ ರಾಜ್ಯದಲ್ಲಿ ಸಾಕಷ್ಟು ಕೃಷಿ ಮಹಾವಿದ್ಯಾಲಯಗಳು ಕಾರ್ಯನಿರ್ವಯಿಸುತ್ತಿರುವುದರಿಂದ ಇನ್ನೂ ಹೆಚ್ಚಿನ ಕಾಲೇಜುಗಳನ್ನು ತೆರೆಯುವುದು ಮತ್ತು ಉನ್ನತೀಕರಿಸುವುದಕ್ಕೆ ಒಪ್ಪಲು ಸಾಧ್ಯವಿಲ್ಲವೆಂದು ಆರ್ಥಿಕ ಇಲಾಖೆಯು ಅಭಿಪ್ರಾಯಿಸಿರುತ್ತದೆ. |

| | | |
|---|---|---|
| ಉ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯ ಸನಿಹದಲ್ಲಿ ಎಲ್ಲಿಯೂ ಕೃಷಿ ಮಹಾವಿದ್ಯಾಲಯ ಇಲ್ಲದಿದ್ದ ಕಾರಣ ಸದರಿ ಭಾಗದ ರೈತರ ಬೇಡಿಕೆಯಿರುವ ಹಿನ್ನೆಲೆಯಲ್ಲಿ 2027-28ನೇ ಶೈಕ್ಷಣಿಕ ವರ್ಷದಿಂದ ಬ್ರಹ್ಮಾವರ ಕೃಷಿ ಮಹಾವಿದ್ಯಾಲಯ ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಿಸಲು ಯಾವಾಗ ಆದೇಶ ಹೊರಡಿಸಲಾಗುವುದು? | ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನಲ್ಲಿ ಹಾಲಿ ಒಂದು ಡಿಪ್ಲೋಮಾ ಕಾಲೇಜು ಕಾರ್ಯನಿರ್ವಹಿಸುತ್ತಿದ್ದು, ಕೆಳದಿ ಶಿವಪ್ಪನಾಯಕ ವಿಶ್ವವಿದ್ಯಾಲಯ, ಶಿವಮೊಗ್ಗದ ವ್ಯಾಪ್ತಿಯಲ್ಲಿ, ಇರುವಕ್ಕಿ, ಮೂಡಿಗೆರೆ ಹಾಗೂ ಹಿರಿಯೂರಿನಲ್ಲಿ ಕೃಷಿ ಪದವಿ ಕಾಲೇಜು ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಮತ್ತು ದಿನಾಂಕ:18/06/2022ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೂತನ ಕಾಲೇಜುಗಳ ತೆರೆಯುವ ಪ್ರಸ್ತಾವನೆಯನ್ನು ಪರಿಗಣಿಸುವ ಮುನ್ನ ಪ್ರಸ್ತುತ ಚಾಲ್ತಿಯಲ್ಲಿರುವ ಕಾಲೇಜುಗಳನ್ನು ಬಲಪಡಿಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ, ಹಾಲಿ ಈ ಪ್ರಸ್ತಾವನೆಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. |

**ಇ-ಸಂಖ್ಯೆ: AGRI/27/AUS/2026**

(ಪಿ.ಎಂ. ನರೇಂದ್ರ ಸ್ವಾಮಿ)
ಕೃಷಿ ಸಚಿವರು.